

ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಭಾರತದ ಸ್ವಾತಂತ್ರ್ಯ ಚಳವಳಿಯ ಕರಾಳ ಅಧ್ಯಾಯ. ಬ್ರಿಟಿಷರ ಅಟ್ಟಹಾಸಕ್ಕೆ ಹಲವಾರು ದೇಶಪ್ರೇಮಿಗಳು ಸಾವಿಗೀಡಾದ ದಿನ, 1919ರ ಏಪ್ರಿಲ್ 13. ಆ ಕರಾಳ ಘಟನೆಗೀಗ ನೂರರ ನೆನಪು. ದುರಂತದ ಕಥೆಯನ್ನು ನೆನಪಿಸುವ ಈ ಬರಹ, ಅಂದಿನ ದೇಶಪ್ರೇಮ ಹಾಗೂ ಇಂದಿನ ದೇಶಪ್ರೇಮದ ಪರಿಕಲ್ಪನೆಯಲ್ಲಾಗಿರುವ ವ್ಯತ್ಯಾಸಗಳನ್ನು ಸೂಚಿಸುತ್ತದೆ.

■ **ರಾಘವೇಂದ್ರ ಕೆ.**

# ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನೂರರ ಕರಾಳ ನೆನಪು

ಬಾಳು ಬೇವು–ಬೆಲ್ಲದ ಸಮ್ಮಿಶ್ರಣ ಎಂಬ ಲೋಕರೂಢಿಯ ಮಾತು ಸಾರ್ವಕಾಲಿಕ. ಮಧ್ಯಾಹ್ನ ಬೆಲ್ಲದ ಸವಿ ಚಪ್ಪರಿಸಿ ಸಂಭ್ರಮಪಟ್ಟು ಇಳಿಹೊತ್ತಿಗೆ ನಡೆದುಹೋದ ಮಾರಣಹೋಮ ಜೀವನದಲ್ಲಿ ಕಂಡರಿಯದಷ್ಟು ಬೇವಿನ ಕಹಿಯನ್ನು ಉಣಬಡಿಸಿದೆ. ಪಂಜಾಬಿನ ಸುಗ್ಗಿಯ ಹಿಗ್ಗಿನ ದಿನವೇ ಅದರ ಮಣ್ಣಿನಲ್ಲಿ ರಕ್ತದೋಕುಳಿ ಚೆಲ್ಲಿ ನರಹತ್ಯೆಯ ಕರಾಳ ಕಹಿ ನೆನಪು ಅನುಗಾಲ ಇಣುಕುವಂತೆ ಮಾಡಿದೆ.

ಪಂಜಾಬ್‌ನಲ್ಲಿ ಬೇಸಿಗೆ ದಿನವೊಂದರ ಮಧ್ಯದಲ್ಲಿ 'ಬೈಸಾಕಿ' ಸುಗ್ಗಿ ಹಬ್ಬದ ಸಂಭ್ರಮ ಕಳೆಗಟ್ಟುತ್ತದೆ. ಪಂಜಾಬಿ ಭಾಷೆಯಲ್ಲಿ 'ಬೈಸಾಕಿ' ಎಂದರೆ ಸುಗ್ಗಿ ಎಂದರ್ಥ. ಕನ್ನಡಿಗರ ಸಂಕ್ರಾಂತಿಯಷ್ಟೇ ಮೆರುಗು ತುಂಬುವ ಹಬ್ಬವಿದು. ಬೈಸಾಕಿ ನಂತರವೇ ಗೋಧಿ ಕಟಾವು ಆರಂಭಿಸುವುದು ಅಲ್ಲಿನ ಸಂಪ್ರದಾಯ. ಆ ಹಬ್ಬಕ್ಕೆ ಚಾರಿತ್ರಿಕ ಮಹತ್ವವೂ ಇದೆ. ಸಿಖ್‌ರ ಗುರು 10ನೇ ಗುರುಗೋವಿಂದ ಸಿಂಗ್ 'ಖಾಲ್ಸಾ' ಪಂಥವನ್ನು ಏಪ್ರಿಲ್ 13, 1699ರಂದು ಸ್ಥಾಪಿಸುತ್ತಾರೆ. ಸಂಪ್ರದಾಯಸ್ಥರಿಗೆ ಅದೇ ಸುಗ್ಗಿ ಹಬ್ಬವೂ ಹೊಸ ವರ್ಷದ ಆರಂಭವೂ. ಆಗುತ್ತದೆ. ಇದು ಬೆಲ್ಲದ ಸವಿಯ ಭಾಗ. ಕಾಲಾನಂತರ ದುರಂತದ ಸಂಸ್ಮರಣೆಯ ಬೇವಿನ ದಿನ ಕೂಡ ಏಪ್ರಿಲ್ 13 ಹೌದಾಗಿರುವುದು ಕರಾಳ ಸತ್ಯ.

ಅದು ಸ್ವಾತಂತ್ರ್ಯ ಚಳವಳಿಯ ಸಂದರ್ಭ. ಪಂಜಾಬಿಗರಿಗೆ 1919ರ ಏಪ್ರಿಲ್ 13ರಂದು ಸುಗ್ಗಿ ಸಂಭ್ರಮದ ದಿನ. ಅಂದು ಇಳಿಹೊತ್ತು. ಅಮೃತಸರದ ಜಲಿಯನ್ ವಾಲಾಬಾಗ್‌ನಲ್ಲಿ ಹತ್ತು ಸಾವಿರಕ್ಕೂ ಅಧಿಕ ಮಂದಿ ಬ್ರಿಟಿಷ್‌ರ ದೌರ್ಜನ್ಯದ ವಿರುದ್ಧ ಪ್ರತಿರೋಧ ದಾಖಲಿಸಲು ನೆರೆದಿದ್ದರು. ಸಾರ್ವಜನಿಕ ಪ್ರತಿಭಟನಾ ಸಭೆಯ ನಿಷೇಧದ ನೆಪದಲ್ಲಿ ಬ್ರಿಟಿಷ್ ಸರ್ಕಾರ ಏಕಾಏಕಿ ಜನಸ್ತೋಮದ ಮೇಲೆ ಗುಂಡಿನ ದಾಳಿ ನಡೆಸಿ ಸಾವಿರಾರು ಸ್ವಾತಂತ್ರ್ಯ ಸೇನಾನಿಗಳನ್ನು ಕೊಂದು ಹಾಕಿತು. ಆ ಕೃತ್ಯದಲ್ಲಿ ಪ್ರಾಣಬಿಟ್ಟ ಹುತಾತ್ಮರ ಬಲಿದಾನವನ್ನು ಗೌರವಿಸುವ ದಿನಗೂಡಿ ಹಬ್ಬ ಬೇವು–ಬೆಲ್ಲದ ಸಮ್ಮಿಳಿತದಂತೆ ಇಂದೂ ಕಾಣಿಸುತ್ತದೆ. ಅದಕ್ಕೀಗ ನೂರು ವರ್ಷ ತುಂಬಿದೆ.

ಅಮೃತಸರದ ಸ್ವರ್ಣಮಂದಿರ ಪಂಜಾಬಿಗರಿಗೆ ಹೃದಯಕಮಲದ ಪವಿತ್ರ ಭಾವ. ಸ್ವರ್ಣಮಂದಿರ ಎಂದ ಕೂಡಲೇ ಅವರು ಭಾವಪರವಶರಾಗುತ್ತಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಹತ್ಯೆ, ಅದರ ನಂತರದಲ್ಲಿ ನಡೆದ ಗಲಭೆಯ ಕೇಂದ್ರವೂ ಇದೇ ಆಗಿತ್ತು. ಕರಾಳ ಹತ್ಯಾಕಾಂಡದ ಕಾರಣಕ್ಕೆ ಇತಿಹಾಸದಲ್ಲಿ ಕಪ್ಪು ಚುಕ್ಕೆಯಂತೆ ಕಾಣುವ ಜಲಿಯಾನ್ ವಾಲಾಬಾಗ್ ಕೂಡ ಅಮೃತಸರದ ಸ್ವರ್ಣಮಂದಿರದ ಸಮೀಪದಲ್ಲಿದೆ. ಇಂದಿಗೂ ಅದರ ಕರಾಳ ನೆನಪು ಭಾರತೀಯರ ಮನದಲ್ಲಿ ದೇಶಪ್ರೇಮದ ರೋಮಾಂಚನ ಮೂಡಿಸುತ್ತದೆ. ಮನಸ್ಸಿನ ಅಂತರಾಳದಲ್ಲಿ ಕ್ರೋಧದ ತಿದಿಯನ್ನು ಒತ್ತಿ ನಿಟ್ಟುಸಿರ ಬಿಸಿಯನ್ನು ಹೊರಹೊಮ್ಮಿಸುತ್ತದೆ.

## ಪಂಜಾಬಿನಲ್ಲಿ ಏನಾಗಿತ್ತು ಎಂದರೆ...

ಲೆಫ್ಟಿನೆಂಟ್ ಗವರ್ನರ್ ಮೈಕೆಲ್‌ನ ದಬ್ಬಾಳಿಕೆಯ ಹೆಚ್ಚಾಗಿತ್ತು. ನಾಗರಿಕ ಹಕ್ಕುಗಳ ನಿರಾಕರಣೆಯಿಂದ ಅಲ್ಲಿನ ಜನ ರೋಸಿದ್ದರು. 1918ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ವಿಶೇಷ ಅಧಿವೇಶನ ಮುಂಬೈಯಲ್ಲಿ ನಡೆದಿತ್ತು. ಅಲ್ಲಿಗೆ ಬಂದ ಪಂಜಾಬಿನ ಪ್ರತಿನಿಧಿಗಳು ತಮ್ಮ ಬೇಗುದಿಯನ್ನು ವೇದಿಕೆಯ ಮುಂದೆ ತೋಡಿಕೊಂಡು, 'ಒಡಲು ಜ್ವಾಲಾಮುಖಿಯನ್ನು